# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು,
# ಬೆಂಗಳೂರು
## ಸರ್ವ ಸದಸ್ಯರ ವಿಶೇಷ ಮಹಾಸಭೆ

ಸ್ಥಳ : ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ ದಿನಾಂಕ : 08/05/2016

ಸಭೆಯಲ್ಲಿ ಹಾಜರಿದ್ದ ಸದಸ್ಯರು : 168 (ಪಟ್ಟಿ ಲಗತ್ತಿಸಲಾಗಿದೆ)

ಪ್ರಾರಂಭದಲ್ಲಿ ಕೋರಂ ಇಲ್ಲದಿದ್ದ ಕಾರಣ ಸಭೆಯನ್ನು ಅರ್ಧ ಗಂಟೆ ಅವಧಿಗೆ ಮುಂದೂಡಲಾಯಿತು. ನಂತರದಲ್ಲಿ 11.30 ಗಂಟೆಗೆ ವಿಜ್ಞಾನ ಗೀತೆಯೊಂದಿಗೆ ಸಭೆಗೆ ಚಾಲನೆ ನೀಡಲಾಯಿತು. ಕರಾವಿಪ ಕಾರ್ಯದರ್ಶಿಗಳಾದ ಡಾ॥ ವಸುಂಧರಾ ಭೂಪತಿಯವರು ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

ಪ್ರಸ್ತುತ ಸಭೆಯ ಅಧ್ಯಕ್ಷರು ಹಾಗು ಕರಾವಿಪದ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್. ವ್ಹಿ. ಸಂಕನೂರ ಅವರು ಮಾತನಾಡುತ್ತಾ ಕರಾವಿಪದ ಬೈಲಾ ಅನ್ನು ಈ ಹಿಂದೆ 2 ಬಾರಿ ಪರಿಷ್ಕರಣೆಗೊಳಪಡಿಸಿದ್ದು ಪರಿಷತ್ತಿನ ಕಾರ್ಯವ್ಯಾಪ್ತಿಯು ಇತ್ತೀಚಿನ ದಿನಗಳಲ್ಲಿ ವಿಸ್ತೃತಗೊಳ್ಳುತ್ತಿರುವುದಲ್ಲದೆ ಸದಸ್ಯತ್ವ ಸಂಖ್ಯೆಯಲ್ಲೂ ಸಹ ಗಣನೀಯವಾಗಿ ಹೆಚ್ಚಳ ಕಂಡು ಬರುತ್ತಿರುವುದರಿಂದ ಮತ್ತೊಮ್ಮೆ ಅದನ್ನು (ಬೈಲಾ) ಪರಿಷ್ಕರಿಸಬೇಕಿರುವ ಅವಶ್ಯಕತೆಯನ್ನು ಮನಗಂಡು, ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್ರಿಸ್ವಾಮಿ ಅವರ ನೇತೃತ್ವದಲ್ಲಿ ಈ ಸಂಬಂದ ತ್ರಿಸದಸ್ಯ ಉಪಸಮಿತಿಯೊಂದನ್ನು ರಚಿಸಲಾಗಿತ್ತು ಎಂದು ಸಭೆಯ ಗಮನಕ್ಕೆ ತಂದರು. ಸದರಿ ಸಮಿತಿಯು ಸಲ್ಲಿಸಿದ ಒಟ್ಟಾರೆ 25 ಶಿಫಾರಸ್ಸುಗಳನ್ನು ದಿ. 18/10/2015 ರಂದು ಜರುಗಿದ ಸರ್ವ ಸದಸ್ಯರ ಸಭೆಯಲ್ಲಿ ಹಾಗೂ ನಂತರದಲ್ಲಿ ದಿ. 06/03/2016 ರಂದು ಜರುಗಿದ ಕಾರ್ಯಕಾರಿ ಸಮಿತಿ ಸಭೆಯಲ್ಲೂ ಸುದೀರ್ಘವಾಗಿ ಚರ್ಚಿಸಿ ಅವುಗಳಲ್ಲಿ 5 ಶಿಫಾರಸ್ಸುಗಳನ್ನು ವಿಶೇಷ ಮಹಾ ಸಭೆಯ ಅನುಮೋದನೆಗೆ ಇಂದು ಮಂಡಿಸಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸುತ್ತಾ ಎಲ್ಲ ಸದಸ್ಯರು ಕರಾವಿಪದ ಹಿತದೃಷ್ಟಿಯಿಂದ ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದರೊಂದಿಗೆ ಉದ್ದೇಶಿತ ತಿದ್ದುಪಡಿಗಳಿಗೆ ಅನುಮೋದನೆ ನೀಡುವಂತೆ ಕೋರಿದರು.

ಪ್ರಸ್ತುತ ಸಭೆಯ ಹಿಂದಿನ ದಿನಾಂಕವರೆಗೆ ಕರಾವಿಪದ ಸದಸ್ಯತ್ವ ಸಂಖ್ಯೆಯ ಬಗ್ಗೆ ಅಧ್ಯಕ್ಷರು ವಿಭಾಗವಾರು ಅಂಕಿ–ಅಂಶಗಳನ್ನು ಒದಗಿಸಿದರು. ನಂತರದಲ್ಲಿ, ಕಾರ್ಯ ಸೂಚಿಯಲ್ಲಿ ಪಟ್ಟಿ ಮಾಡಿದ ಶಿಫಾರಸ್ಸುಗಳನ್ನು ಕ್ರಮಾಂಕದನ್ವಯ ಚರ್ಚಿಸಿ ತತ್ಸಂಬಂಧ ಕೈಗೊಂಡ ನಿರ್ಣಯಗಳು ಈ ಕೆಳಗಿನಂತಿವೆ :

| ಕ್ರಮಾಂಕ | ಬೈಲಾ ಕಂಡಿಕೆ | ಉದ್ದೇಶಿತ ತಿದ್ದುಪಡಿ | ವಿಶೇಷ ಸಭೆಯ ನಿರ್ಣಯ |
|---|---|---|---|
| 1 | 2.2 | ಕರಾವಿಪ ಸದಸ್ಯತ್ವ ಹೊಂದಲು ವಾಸಸ್ಥಾನದ ಬಗ್ಗೆ ಯಾವುದಾದರೊಂದು ಪುರಾವೆ ಇರತಕ್ಕದ್ದು. ಉದಾ: ವೋಟರ್ಸ ಐಡಿ ಕಾರ್ಡ ಆಧಾರ ಕಾರ್ಡ / ಪಡಿತರ ಚೀಟಿ / ಡ್ರೈವಿಂಗ ಲೈಸೆನ್ಸ್ / ವಾಸ ಸ್ಥಳದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ, ಇತ್ಯಾದಿ. | ಸಭೆಯು ಉದ್ದೇಶಿತ ತಿದ್ದುಪಡಿಗೆ ಸರ್ವಾನುಮತದಿಂದ ಅನುಮೋದನೆ ಸೂಚಿಸಿತು. ಇದರ ಜೊತೆಗೆ ಈ ಕೆಳಗಿನ ಅಂಶಗಳನ್ನು ಸಹ ತಿದ್ದುಪಡಿಗೆ ಸೇರ್ಪಡೆಮಾಡಲು ಸರ್ವಾನುಮತದಿಂದ ಸೂಚಿಸಿತು.<br><br>1. ಸಾಂಸ್ಥಿಕ ಸದಸ್ಯತ್ವ ಬಯಸುವ ಖಾಸಗೀ ಸಂಸ್ಥೆಗಳು ಮೂಲ ನೋಂದಣಿ ಹಾಗೂ ಪ್ರಸ್ತುತ ವರ್ಷದ ನವೀಕರಣ ಪತ್ರಗಳ ದೃಢೀಕೃತ ಜೆರಾಕ್ಸ್ ಪ್ರತಿ ಸಲ್ಲಿಸುವುದು. (ಸರ್ಕಾರಿ ಶಾಲಾ ಕಾಲೇಜುಗಳಿಗೆ ಇದು ಅನ್ವಯಿಸುವುದಿಲ್ಲ). |

| | | | |
|---|---|---|---|
| | | | 2. ವರ್ಗಾವಣೆಗೆ ಒಳಪಟ್ಟ ನೌಕರರು ವರ್ಗಾವಣಾ ಆದೇಶದ ಪ್ರತಿ ಸಲ್ಲಿಸುವುದು.<br><br>ಸೂಚಕರು : ಡಾ. ವ್ಹಿ. ಜಗನಾಥ<br>ಅನುಮೋದಕರು :ಡಾ॥ ಸಿ. ಜಿ. ಹವಾಲ್ದಾರ |
| 2 | 6.2 (i) | ಕಾರ್ಯಕಾರಿ ಸಮಿತಿ ಚುನಾವಣೆಯ ನಂತರ ಎರಡು ತಿಂಗಳೊಳಗಾಗಿ ಎಲ್ಲ ಜಿಲ್ಲಾ ಸಮಿತಿಗಳು ಪುನಃ ರಚನೆಯಾಗಬೇಕು ಜಿಲ್ಲಾ ಸಮಿತಿಯ ಅವಧಿಯು ಕಾರ್ಯಕಾರಿ ಸಮಿತಿ ಅವಧಿಯೊಂದಿಗೆ ಮುಕ್ತಾಯವಾಗುತ್ತದೆ. | ಈ ತಿದ್ದುಪಡಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡುತ್ತಾ ತಿದ್ದುಪಡಿಯಲ್ಲಿ ಈ ಮುಂದಿನ ಅಂಶಗಳನ್ನು ಹೆಚ್ಚುವರಿಯಾಗಿ ಅಳವಡಿಸುವಂತೆ ಸೂಚಿಸಿತು.<br><br>1. ಪ್ರಸ್ತುತ ಚಾಲನೆಯಲ್ಲಿರುವ ಜಿಲ್ಲಾ ಸಮಿತಿಗಳು ನಂತರದಲ್ಲಿ ರಚಿತವಾದ ಜಿಲ್ಲಾ ಸಮಿತಿಗಳಿಗೆ ಆಡಳಿತದ ಹಾಗೂ ಲೆಕ್ಕ ಪತ್ರ ವ್ಯವಹಾರಗಳಿಗೆ ಸಂಬಂದಿಸಿದ ಎಲ್ಲ ದಾಖಲೆಗಳನ್ನು ಅಧಿಕೃತವಾಗಿ ವರ್ಗಾಯಿಸುವುದು.<br><br>2. ರಾಜ್ಯ ಕಾರ್ಯಕಾರಿ ಸಮಿತಿಯ ಪೂರ್ವಾನುಮತಿಯಿಲ್ಲದೆ ಜಿಲ್ಲಾ ಸಮಿತಿಯು ಯಾವುದೇ ರೀತಿಯ ಸಾಲ ಮಾಡುವಂತಿಲ್ಲ.<br><br>ಸೂಚಕರು : ಹೇಮಾ ಪಟ್ಟಣಶೆಟ್ಟಿ<br>ಅನುಮೋದಕರು: ಡಾ॥ ವ್ಹಿ. ಜಗನಾಥ |
| 3 | 6.2 (i) | ರಾಜ್ಯದ ಯಾವುದೇ ತಾಲೂಕಿನಲ್ಲಿ 10 ಕ್ಕೂ ಹೆಚ್ಚು ಕರಾವಿಪ ಸದಸ್ಯರಿದ್ದರೆ ಅಂತಹ ತಾಲೂಕುಗಳಲ್ಲಿ ಪರಿಷತ್ತಿನ ತಾಲೂಕು ಸಮಿತಿ ರಚಿಸುವುದು. | ತಾಲೂಕು ಸಮಿತಿಯ ರಚನೆಗೆ ಸದಸ್ಯತ್ವ ಸಂಖ್ಯೆಯನ್ನು ಉದ್ದೇಶಿತ 10ರ ಬದಲಿಗೆ ಕನಿಷ್ಠ 25ಕ್ಕೆ ಏರಿಸಲು ಸಭೆಯು ಶಿಫಾರಸ್ಸು ಮಾಡುತ್ತ ಈ ತಿದ್ದುಪಡಿಗೆ ಅನುಮೋದನೆ ನೀಡಿತು.<br><br>ಸೂಚಕರು : ಈ. ಬಸವರಾಜು<br>ಅನುಮೋದಕರು : ಪ್ರಭಾಕರ, ಚಿಕ್ಕಮಗಳೂರು |
| 4 | 6.4.1 (vi)<br>ಅನುಬಂಧ–1ಕ್ಕೆ ತಿದ್ದುಪಡಿ<br>2 (6) ಅ. | ಸದಸ್ಯತ್ವ ಹೊಂದಿದ ಕನಿಷ್ಟ 3 ವರ್ಷಗಳ ನಂತರ ಮತದಾನದ ಹಕ್ಕಿಗೆ ಒಳಪಡುವುದು. | ಮತದಾನದ ಹಕ್ಕನ್ನು ಪಡೆಯಲು ಚುನಾವಣಾ ಅಧಿಸೂಚನೆ ದಿನಾಂಕದಂದಿಗೆ ಕನಿಷ್ಠ ಒಂದು ವರ್ಷದ ಸದಸ್ಯತ್ವ ಅವಧಿಯನ್ನು ಪೂರ್ಣಗೊಳಿಸಿರಬೇಕು. 2016ರ ಚುನಾವಣೆಗೆ ಸಂಬಂಧಿಸಿದಂತೆ ಸಂಘ ಸಂಸ್ಥೆಗಳ ನೋಂದಣಿ ಕಛೇರಿಯಲ್ಲಿ ಈ ತಿದ್ದುಪಡಿ ನೋಂದಣಿಯಾಗುವ ದಿನಾಂಕದವರೆಗೂ ಸದಸ್ಯತ್ವ ಪಡೆದವರಿಗೆ ಮತದಾನದ ಹಕ್ಕು ನೀಡಲು ಸಭೆಯು ಸೂಚಿಸಿತು. |
| 5 | 6.4.1 | ಮಹಿಳೆ ಹಾಗೂ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಪ್ರಾತಿನಿಧ್ಯ : ಕಾರ್ಯಕಾರಿ | ಕರಾವಿಪದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಈ ಒಂದು ಶಿಪಾರಸ್ಸನ್ನು ಬೈಲಾದಲ್ಲಿ ಅಳವಡಿಸಲು |

| | | | |
|---|---|---|---|
| | | ಸಮಿತಿ ಸದಸ್ಯರ 24 ಸ್ಥಾನಗಳಲ್ಲಿ ವಿಭಾಗವಾರು ಸರದಿ ಆಧಾರ ತಲಾ ಒಂದು ಸ್ಥಾನವನ್ನು ಮಹಿಳೆಯರಿಗೆ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸುವುದು. ಪ್ರಾರಂಭದ ಹಂತದಲ್ಲಿ ಮೈಸೂರು ವಿಭಾಗಕ್ಕೆ (ಮಹಿಳೆ) ಮತ್ತು ಬೆಂಗಳೂರು ವಿಭಾಗಕ್ಕೆ (ಪ.ಜಾ ಅಥವಾ ಪ.ಪಂ) ಮೀಸಲಾತಿ ನೀಡುವಂತೆ ಹಾಗೂ ಮುಂದಿನ ಚುಣಾವಣೆಗಳಲ್ಲಿ ಕಲಬುರ್ಗಿ ವಿಭಾಗಕ್ಕೆ (ಮಹಿಳೆ) ಮತ್ತು ಬೆಳಗಾವಿ ವಿಭಾಗಕ್ಕೆ (ಪ.ಜಾ ಅಥವಾ ಪ.ಪಂ) ಮೀಸಲಾತಿ ನೀಡುವುದು. | ಉದ್ದೇಶಿಸಿರುವ ಹಿನ್ನೆಲೆಯಲ್ಲಿ, ಅದರ ವಿವಿಧ ಆಯಾಮಗಳ ಕುರಿತು ಸುದೀರ್ಘವಾಗಿ ಸಮಾಲೋಚನೆ ನಡೆಸಿ ಸಧ್ಯಕ್ಕೆ ಮಂಡಿಸಿದ ತಿದ್ದುಪಡಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಪ.ಜಾ ಅಥವಾ ಪ.ಪಂಗಡದ ಒಂದು (1) ಮೀಸಲಾತಿ ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಯಾರು (ಪ.ಜಾ ಅಥವಾ ಪ.ಪಂ) ಹೆಚ್ಚು ಮತಗಳನ್ನು ಗಳಿಸುತ್ತಾರೋ, ಆ ವರ್ಗದ ವ್ಯಕ್ತಿಯನ್ನು ವಿಜೇತನೆಂದು ಘೋಷಿಸುವುದು.<br><br>ಮಹಿಳೆ ಹಾಗೂ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಮೀಸಲಾತಿ 'ರೋಸ್ಟರ್' ನಿಗದಿಪಡಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಗೆ ನೀಡುವಂತೆ ಸಭೆಯು ಸೂಚಿಸಿತು.<br><br>ಸೂಚಕರು : ಪಂಡಿತ ಬಾಳೂರೆ<br>ಅನುಮೋದಕರು : ಜಗನಾಥ ಹಾಲಮಡಿಗೆ |

ಮೇಲ್ಕಂಡ ಶಿಫಾರಸ್ಸುಗಳನ್ನು ಕೆಲವು ಪರಿಷ್ಕರಣೆಗಳೊಂದಿಗೆ ಕರಾವಿಪದ ಬೈಲಾದಲ್ಲಿ ಅಳವಡಿಸಲು ಅನುಮೋದನೆ ನೀಡಿದ್ದಕ್ಕೆ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು. ಅತಿ ಶೀಘ್ರದಲ್ಲೇ ಈ ಶಿಫಾರಸ್ಸುಗಳನ್ನು ಅವಶ್ಯ ದಾಖಲೆಗಳೊಂದಿಗೆ ಸಂಘ ಸಂಸ್ಥೆಗಳ ನೋಂದಣಾಧಿಕಾರಿಯವರಿಗೆ ಸಲ್ಲಿಸಿ ಅನುಮೋದನೆ ಪಡೆಯಲಾಗುವುದೆಂದು ಸಭೆಗೆ ತಿಳಿಸಿದರು. ನಂತರದಲ್ಲಿ, ಕರಾವಿಪ ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್ರಿಸ್ವಾಮಿ ಅವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಡಾ॥ ವಸುಂಧರಾ ಭೂಪತಿ
ಗೌರವ ಕಾರ್ಯದರ್ಶಿ

ಶ್ರೀ ಎಸ್. ವ್ಹಿ. ಸಂಕನೂರ
ಮಾನ್ಯ ಅಧ್ಯಕ್ಷರು